**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ**

**ಉಪಸ್ಥಿತರು**

**ಶ್ರೀಮತಿ ಲಕ್ಷ್ಮಿ.ಎಂ.ವಿ**

ಬಿ.ಎ,, ಎಲ್.ಎಲ್.ಬಿ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಚನ್ನರಾಯಪಟ್ಟಣ

**ತೀರ್ಪಿನ ದಿನಾಂಕಃ 16 ನೇ ಜನವರಿ 2021**

**ಅಸಲು ದಾವಾ ನಂ. 714/2018**

**ವಾದಿ:** ನಾಗರಾಜ ಬಿನ್ ಲೇಟ್ ನಂಜ ಉಃ ನಂಜೇಗೌಡ
ಸುಮಾರು 40 ವರ್ಷ ವಯಸ್ಸು,
ಅಗ್ರಹಾರ ಗ್ರಾಮ, ಬಾಗೂರು ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

( ವಾದಿಯ ಪರ ಶ್ರೀ ಟಿ.ಎಸ್. ಪ್ರಕಾಶ್ ., ವಕೀಲರು)

**-ವಿರುದ್ಧ-**

**ಪ್ರತಿವಾದಿಯರುಃ** 1. ರಂಗಮ್ಮ ಕೋಂ ನಂಜ ಉಃ ನಂಜೇಗೌಡ
ಸುಮಾರು 85 ವರ್ಷ ವಯಸ್ಸು,

2. ರಂಗೇಗೌಡ ಉಃ ತಮ್ಮಯ್ಯ
ಬಿನ್ ಲೇಟ್ ನಂಜ ಉಃ ನಂಜೇಗೌಡ,
ಸುಮಾರು 72 ವರ್ಷ ವಯಸ್ಸು,

3. ನಂಜುಂಡೇಗೌಡ ಬಿನ್ ಲೇಟ್ ನಂಜ ಉಃ ನಂಜೇಗೌಡ,

ಸುಮಾರು 66 ವರ್ಷ ವಯಸ್ಸು,

4. ಶಾರದಮ್ಮ ಬಿನ್ ಲೇಟ್ ನಂಜ ಉಃ ನಂಜೇಗೌಡ,
ಸುಮಾರು 40 ವರ್ಷ ವಯಸ್ಸು,
1 ರಿಂದ 4 ನೇ ಪ್ರತಿವಾದಿಯರ ವಾಸಃ
ಅಗ್ರಹಾರ ಗ್ರಾಮ, ಬಾಗೂರು ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

5. ರಾಧಮ್ಮ ಕೋಂ ಶ್ರೀನಿವಾಸ,
ಬಿನ್ ಲೇಟ್ ನಂಜ ಉಃ ನಂಜೇಗೌಢ
ಸುಮಾರು 35 ವರ್ಷ ವಯಸ್ಸು,
ಚಿಕ್ಕಯರಗನಾಳು ಗ್ರಾಮ,
ಗಂಡಸಿ ಹೋಬಳಿ,
ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.
(ಪ್ರತಿವಾದಿಯರ ಪರ ಏಕಪಕ್ಷೀಯ )

| | | |
|---|---|---|
| 1.ದಾವಾ ದಾಖಲು ಮಾಡಿದ ದಿನಾಂಕ | : | 07-12-2018 |
| 2. ದಾವೆಯ ಸ್ವರೂಪ | : | ವಿಭಾಗ ಕೋರಿ |
| 3. ಸಾಕ್ಷ್ಯ ಪ್ರಾರಂಭವಾದ ದಿನಾಂಕ | : | 04-01-2021 |
| 4. ತೀರ್ಪು ನೀಡಿದ ದಿನಾಂಕ | : | 16-01-2021 |

| | | | | |
|---|---|---|---|---|
| 5. ಒಟ್ಟು ತೆಗೆದುಕೊಂಡ ಸಮಯ | : | ವರ್ಷ | ತಿಂಗಳು | ದಿನ |
| | | 02 | 01 | 09 |

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

# ತೀರ್ಪು

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ದಾವಾ ಸ್ವತ್ತಿನಲ್ಲಿ ವಾದಿಗೆ ಬರಬೇಕಾದ ತಲಾ 1/6 ನೇ ಭಾಗದ ಹಿಸ್ಸಾ ಹಕ್ಕು ನೀಡಬೇಕೆಂದು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

2. **ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ**

ವಾದಿ ಮತ್ತು 2 ರಿಂದ 5 ನೇ ಪ್ರತಿವಾದಿಯರ ತಂದೆ ನಂಜ ಉಃ ನಂಜೇಗೌಡ ಬಿನ್ ಶಿವನಂಜೇಗೌಡರವರ ಮೊದಲನೇ ಹೆಂಡತಿ ಮಗ ವಾದಿಯಾಗಿದ್ದು, ಮೊದಲನೇ ಹೆಂಡತಿ ಮರಣ ಹೊಂದಿದ ನಂತರ 1 ನೇ ಪ್ರತಿವಾದಿ ರಂಗಮ್ಮ ಎಂಬುವವರನ್ನು ಲಗ್ನವಾಗಿರುತ್ತಾರೆ. ವಾದಿ ಮತ್ತು 3 ರಿಂದ 5 ನೇ ಪ್ರತಿವಾದಿಯರು ರಂಗಮ್ಮರವರ ಮಕ್ಕಳುಗಳಾಗಿರುತ್ತಾರೆ. 1986 ರಲ್ಲಿ ವಾದಿ ಮತ್ತು 2 ರಿಂದ 5 ನೇ ಪ್ರತಿವಾದಿಯರ ತಂದೆ ಮರಣ ಹೊಂದಿರುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ಅನುಭವಿಸಿಕೊಂಡು ಬರುತ್ತಿರುತ್ತಾರೆ. ನಂತರ **ಎ** ಅನುಸೂಚಿ ಸ್ವತ್ತುಗಳನ್ನು ವಾದಿಯ ಹಿಸ್ಸೆಗೆ

ಬಿಡಲಾಗಿದ್ದು, **ಬಿ** ಅನುಸೂಚಿ ಸ್ವತ್ತುಗಳನ್ನು 2 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿರುತ್ತಾರೆ.

3. ದಾವಾ ಅನುಸೂಚಿ ಸ್ವತ್ತುಗಳಲ್ಲಿ 1 ನೇ ಐಟಂ ಸ್ವತ್ತು ವಾದಿಯ ತಂದೆ ನಂಜ ಉಃ ನಂಜೇಗೌಡ ಬಿನ್ ಶಿವನಂಜೇಗೌಡರವರ ಹೆಸರಿನಲ್ಲಿ ಮುಂದುವರೆದುಕೊಂಡು ಬರುತ್ತಿರುತ್ತದೆ. ವಾದಿ ಸುಮಾರು 4 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದು ದಾವಾ **ಎ** ಅನುಸೂಚಿ ಸ್ವತ್ತುಗಳನ್ನು ತನ್ನ ಸಹೋದರರಾದ 2 ಮತ್ತು 3 ನೇ ಪ್ರತಿವಾದಿಯರ ಸ್ವಾಧೀನಕ್ಕೆ ಬಿಟ್ಟು ಕೊಟ್ಟು ಅವರಿಂದ ವರ್ಷಕ್ಕೆ ಇಂತಿಷ್ಟು ದಿನಸಿಯನ್ನು ಪಡೆದುಕೊಳ್ಳುತ್ತಾ ಬರುತ್ತಿರುತ್ತಾರೆ. ವಾದಿಯು ಈಗ್ಗೆ 15 ದಿವಸಗಳ ಹಿಂದೆ ತನ್ನ ಗ್ರಾಮಕ್ಕೆ ಬಂದು ದಾವಾ **ಎ** ಅನುಸೂಚಿ 1 ನೇ ಐಟಂ ಸ್ವತ್ತಿನ ಖಾತೆಯನ್ನು ಪೌತಿ ತಂದೆ ಹೆಸರಿನಿಂದ ವಾದಿಯ ಹೆಸರಿಗೆ ಬದಲಾಯಿಸಿಕೊಳ್ಳುವ ಸಲುವಾಗಿ 2 ಮತ್ತು 3 ನೇ ಪ್ರತಿವಾದಿಯರನ್ನು ಕೇಳಲಾಗಿ, ಅದಕ್ಕೆ 2 ಮತ್ತು 3 ನೇ ಪ್ರತಿವಾದಿಯರು ಖಾತೆ ಬದಲಾವಣೆಗೆ ನಿರಾಕರಿಸಿರುತ್ತಾರೆ. 4 ನೇ ಪ್ರತಿವಾದಿ ಲಗ್ನವಾಗಿರುವುದಿಲ್ಲ. 1 ನೇ ಪ್ರತಿವಾದಿಯ ಯೋಗಕ್ಷೇಮವನ್ನು ನೋಡಿಕೊಂಡು ಬರುತ್ತಿರುತ್ತಾರೆ. ಆದ್ದರಿಂದ ಅನ್ಯಮಾರ್ಗ ಕಾಣದೇ ವಾದಿಯು ಪ್ರತಿವಾದಿಯರ ವಿರುದ್ಧ ದಾವಾ ಎ ಅನುಸೂಚಿ ಸ್ವತ್ತಿಗೆ ವಾದಿಯೇ ಹಿಸ್ಸಾ ಹಕ್ಕುದಾರನೆಂದು ಘೋಷಿಸಿ ಸ್ವಾಧೀನ ಹೊಂದುವಂತೆ ಹಾಗೂ 1/6 ನೇ ಭಾಗದ ಹಿಸ್ಸೆಯನ್ನು ಕೋರಿ ದಾವಾ ದಾಖಲು ಮಾಡಿದ್ದು ದಾವಾವನ್ನು ಡಿಕ್ರಿ ಮಾಡಲು ಕೋರಿಕೊಂಡಿದ್ದಾರೆ

4. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗಿದ್ದು, ಪ್ರತಿವಾದಿಯರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಅವರನ್ನು ಏಕಪಕ್ಷೀಯ ಎಂದು ಆದೇಶ ಮಾಡಲಾಗಿದೆ.

5. ವಾದಿಯು ತನ್ನ ದಾವೆಯನ್ನು ರುಜುವಾತುಪಡಿಸಲು ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ನುಡಿ ಸಾಕ್ಷ್ಯ ಮಾಡಿಸಿಕೊಂಡಿರುತ್ತಾರೆ. ದಾಖಲೆಗಳನ್ನು ನಿಶಾನೆ ಪಿ-1 ರಿಂದ 7 ಎಂದು ಗುರುತಿಸಿಕೊಂಡಿರುತ್ತಾರೆ. ವಾದಿಯ ಪರ ವಿಚಾರಣೆ ಮುಕ್ತಾಯಗೊಳಿಸಿಕೊಂಡಿರುತ್ತಾರೆ.

6. ವಾದಿಯ ಪರ ವಕೀಲರ ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಆಲಿಸಲಾಗಿದೆ. ಸಮಗ್ರ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ

7. ಈ ಕೆಳಕಂಡ ಅಂಶಗಳನ್ನು ತಿರ್ಮಾನಿಸುವುದು ಅವಶ್ಯಕವೆಂದು ಕಂಡು ಬರುತ್ತದೆ.

## ಅಂಶಗಳು

**1. ವಾದಿಯು, ದಾವಾ ಸ್ವತ್ತುಗಳು ತನ್ನ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತವಾದ ಸ್ವತ್ತುಗಳಾಗಿವೆ ಎಂದು ರುಜುವಾತುಪಡಿಸುತ್ತಾರೆಯೆ?**

**2. ವಾದಿಯು , ದಾವಾ ಸ್ವತ್ತಿನಲ್ಲಿ 1/6 ನೇ ಭಾಗದ ಹಿಸ್ಸಾ ಹಕ್ಕನ್ನು ಹೊಂದಿದ್ದಾರೆಂದು ರುಜುವಾತುಪಡಿಸುತ್ತಾರೆಯೇ?**

**3. ವಾದಿಯು ದಾವೆಯಲ್ಲಿ ಪರಿಹಾರ ಪಡೆದುಕೊಳ್ಳಲು ಅರ್ಹರಿರುತ್ತಾರೆಯೆ?**

**4. ಯಾವ ಆದೇಶ?**

8. ಮೇಲ್ಕಂಡ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

1 ನೇ ಅಂಶ : ಸಕಾರಾತ್ಮಕವಾಗಿ

2 ನೇ ಅಂಶ : ಸಕಾರಾತ್ಮಕವಾಗಿ

3 ನೇ ಅಂಶ : ಭಾಗಶಃ ಸಕಾರಾತ್ಮಕವಾಗಿ

4 ನೇ ಅಂಶ : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

## -ಕಾರಣಗಳುಃ-

9. **ಅಂಶ 1 ರಿಂದ 3:** ಈ ಮೂರು ಅಂಶಗಳ ಮೇಲಿನ ಚರ್ಚೆಯು ಒಂದಕ್ಕೊಂದು ಅವಲಂಬಿತವಾಗಿರುವುದರಿಂದ, ವಾಕ್ಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಇಲ್ಲಿ ಒಟ್ಟಿಗೆ ಚರ್ಚೆಗೆ ತೆಗದುಕೊಳ್ಳಲಾಗಿದೆ.

10. ವಾದಿಯು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ಪುನರ್ ಉಚ್ಚರಿಸಿದ್ದಾರೆ. ವಾದಿಯು ತಮ್ಮ ಪರವಾಗಿ ನಿಪಿ-1 ವಂಶವೃಕ್ಷ ನಿಪಿ-2 ರಿಂದ 7 ಪಹಣಿಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿದ್ದಾರೆ. ನಿಪಿ-2 ಪಹಣಿಯಾಗಿದ್ದು ಎ ಷೆಢ್ಯೂಲ್‌ನ ದಾವಾ ಐಟಂ ನಂ.1 ಸರ್ವೆ.ನಂ. 76/4 ಸ್ವತ್ತು ವಾದಿಯ ತಂದೆಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-3 ಮತ್ತು 4 ಪಹಣಿಯಾಗಿದ್ದು ದಾವಾ ಬಿ ಷೆಢ್ಯೂಲ್ ನ ಐಟಂ 1 , 2 ಸರ್ವೆ.ನಂ. 28/3 ಮತ್ತು 72/3 ಸ್ವತ್ತುಗಳು 2 ನೇ ಪ್ರತಿವಾದಿಯ ಹೆಸರಿಗೆ ವಿಭಾಗದಂತೆ ಖಾತೆಯಾಗಿರುವುದು ಕಂಡು ಬರುತ್ತದೆ. ನಿಪಿ-5 ಪಹಣಿಯಾಗಿದ್ದು ದಾವಾ ಬಿ ಷೆಢ್ಯೂಲ್ ನ ಐಟಂ ನಂ.3 ಸರ್ವೆ.ನಂ, 72/8 ಸ್ವತ್ತು ಪ್ರತಿವಾದಿ 1 ಮತ್ತು 2 ರವರ ಹೆಸರಿಗೆ ಖಾತೆಯಾಗಿರುವುದು ಕಂಡು ಬರುತ್ತದೆ. ನಿಪಿ-6 ಪಹಣಿಯಾಗಿದ್ದು ಸರ್ವೆ. ನಂ. 76/11 2 ನೇ ಪ್ರತಿವಾದಿಯ ಹೆಸರಿಗೆ ವಿಭಾಗದಂತೆ ಖಾತೆಯಾಗಿರುವುದು ಕಂಡು ಬರುತ್ತದೆ. ನಿಪಿ-7 ಬಿ ಷೆಢ್ಯೂಲ್ ನ ಸರ್ವೆ.ನಂ. 93 ರಲ್ಲಿ 4 ಎಕರೆ ಸ್ವತ್ತಿನ

ಪೈಕಿ 2 ನೇ ಪ್ರತಿವಾದಿಗೆ 1 ಎಕರೆ 25 ಗುಂಟೆ , 3 ನೇ ಪ್ರತಿವಾದಿ 25 ಗುಂಟೆ, ವಾದಿಗೆ 1 ಎಕರೆ 30 ಗುಂಟೆ ಖಾತೆಯಾಗಿರುವುದು ಕಂಡು ಬರುತ್ತದೆ.

11. ವಾದಿಯು ತನ್ನ ವಾದ ಪತ್ರದಲ್ಲಿ ತಿಳಿಸಿರುವಂತೆ ಎ ಷೆಡ್ಯೂಲ್ ಸ್ವತ್ತಿನ ಐಟಂ ನಂ1 ಸರ್ವೆ.ನಂ. 76/4 ಹೊರತು ಪಡಿಸಿ ಇತರೆ ಸ್ವತ್ತುಗಳನ್ನು ವಾದಿ ಮತ್ತು ಪ್ರತಿವಾದಿಯರು ಹಿಸ್ಸೆ ಮಾಡಿಕೊಂಡು ವಿಭಾಗದಂತೆ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದು ವಾದಿಯು ಹಾಜರುಪಡಿಸಿರುವ ದಾಖಲೆಗಳಿಂದ ಕಂಡು ಬರುತ್ತದೆ. ಸರ್ವೆ.ನಂ 76/4 ರಲ್ಲಿ 1 ಎಕರೆ 4 ಗುಂಟೆ ಸ್ವತ್ತು ವಾದಿಯ ತಂದೆಯ ಹೆಸರಿನಲ್ಲಿರುವುದು ನಿಪಿ-2 ದಾಖಲೆಯಿಂದ ಕಂಡು ಬರುತ್ತದೆ.

12. ವಾದಿಯ ನುಡಿಸಾಕ್ಷ್ಯ ಮತ್ತು ದಾಖಲೆಗಳನ್ನು ಅಲ್ಲಗಳೆಯಲು ಈ ನ್ಯಾಯಾಲಯದ ಮುಂದೆ ಪ್ರತಿವಾದಿಯರ ಪರ ಯಾವುದೇ ನುಡಿ ಸಾಕ್ಷ್ಯ ಲಭ್ಯವಿರುವುದಿಲ್ಲ. ಆದ್ದರಿಂದ, ಎ ಷೆಡ್ಯೂಲ್ ಸ್ವತ್ತಿನ ಐಟಂ ನಂ.1 ಸರ್ವೆ.ನಂ. 76/4 ಸ್ವತ್ತಿನಲ್ಲಿ ವಾದಿಯು ದಾವೆಯಲ್ಲಿ ಕೋರಿರುವಂತೆ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ ವಾದಿಯ ನುಡಿ ಸಾಕ್ಷ್ಯ ಮತ್ತು ದಾಖಲೆಗಳನ್ನು ಈ ಹಂತದಲ್ಲಿ ಒಪ್ಪಲೇಬೇಕಾಗುತ್ತದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಈ ಕಾರಣಗಳಿಗಾಗಿ ಅಂಶ ನಂ.1 ಮತ್ತು 2 ನ್ನು **ಸಕಾರಾತ್ಮಕವಾಗಿ ಮತ್ತು** ಅಂಶ 3 ನ್ನು **ಭಾಗಶಃ ಸಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

11. **ಅಂಶಃ 4** ಮೇಲಿನ ಅಂಶಗಳಲ್ಲಿ ಹೇಳಲಾದ ಕಾರಣಗಳಿಂದ ಮತ್ತು ಅವುಗಳಿಗೆ ನೀಡಲಾದ ಉತ್ತರಗಳಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

# -ಆದೇಶಃ

**ವಾದಿಯ ದಾವೆಯನ್ನು ಭಾಗಾಶಃ ಡಿಕ್ರಿ ಮಾಡಲಾಗಿದೆ**

**ವಾದಿಯು ದಾವಾ ಎ ಷೆಡ್ಯೂಲ್ ನ ಐಟಂ ನಂ.1 ಸ್ವತ್ತಿನಲ್ಲಿ 1/6 ನೇ ಹಿಸ್ಸೆಯನ್ನು ವಿಭಾಗ ಮಾಡಿ ಅದರ ಪ್ರತ್ಯೇಕ ಹಿಸ್ಸೆಯನ್ನು ಪಡೆದುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.**

**ಈ ಮೇಲಿನ ಆದೇಶದಂತೆ ಡಿಕ್ರಿ ಬರೆಯುವುದು.**

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನವನ್ನು ಕೊಟ್ಟು, ಅವರ ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿದ ನಂತರ ತಪ್ಪಿದ್ದಲ್ಲಿ ತಿದ್ದಿ ಇಂದು ದಿನಾಂಕ 16 ನೇ ಜನವರಿ 2021 ರಂದು ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

## -: ಅನುಬಂಧ : -

1. ವಾದಿಯ ಪರ ವಿಚಾರಿಸಲಾದ ಸಾಕ್ಷಿಗಳುಃ

ಪಿ.ಡಬ್ಲ್ಯೂ-1 : ನಾಗರಾಜ

2. ವಾದಿಯ ಪರ ಗುರುತಿಸಲಾದ ದಾಖಲೆಗಳುಃ

ನಿಶಾನೆ ಪಿ-1 : ವಂಶವೃಕ್ಷ

ನಿಶಾನೆ ಪಿ-2 ರಿಂದ 7 : ಪಹಣಿಗಳು

3. ಪ್ರತಿವಾದಿಯರ ಪರ ವಿಚಾರಿಸಲಾದ ಸಾಕ್ಷಿಗಳುಃ

-ಯಾರೂ ಇಲ್ಲ-

4. ಪ್ರತಿವಾದಿಯರ ಪರವಾಗಿ ಹಾಜರು ಪಡಿಸಿದ ದಾಖಲೆಗಳುಃ

-ಏನೂ ಇಲ್ಲ-

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.